## ಹೊಸ ವರ್ಷಕ್ಕೆ ಹೊಸ ಕುಡುಕರು

ಹಬ್ಬದ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ಹೊಸ ಕುಡುಕರು ಹುಟ್ಟಿಕೊಳ್ಳುತ್ತಿದ್ದಾರೆ ಎಂದು ಮುಂಬೈ ಮೂಲದ ಸಂಶೋಧಕರು ನಡೆಸಿದ ಅಧ್ಯಯನ ಬಹಿರಂಗಪಡಿಸಿದೆ.

ಹದಿನೆಂಟು ವರ್ಷ ದಾಟಿದ ಮಕ್ಕಳು ಮೊದಲು ಮದ್ಯದ ಅಮಲನ್ನು ಅನುಭವಿಸುವುದು ಹೊಸ ವರ್ಷ ಹಾಗೂ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಎಂದು ಸಂಶೋಧಕರು ಹೇಳಿದ್ದಾರೆ.

ಮುಂಬೈ, ಬೆಂಗಳೂರು, ಹೈದರಾಬಾದ್ ಸೇರಿದಂತೆ ಆಯ್ದ ಮಹಾನಗರಗಳಲ್ಲಿ 14ರಿಂದ 29 ವರ್ಷದೊಳಗಿನ 1770 ಮಂದಿಯನ್ನು ಸಂಶೋಧಕರು ಆಯ್ಕೆ ಮಾಡಿಕೊಂಡಿದ್ದರು. ಅವರಲ್ಲಿ ಸುಮಾರು ಶೇ.70ರಷ್ಟು ಮಕ್ಕಳು ಹೊಸ ಹಬ್ಬದ ಮೋಜಿಗೆ ತಲಾ 2 ಸಾವಿರದಿಂದ ಹತ್ತು ಸಾವಿರ ವ್ಯಯಿಸುವುದನ್ನು ತಜ್ಞರು ಗುರುತಿಸಿದ್ದಾರೆ. ಮಹಾನಗರಗಳಲ್ಲಿ ಲಿಂಗ ಭೇದ ಇಲ್ಲದಂತೆ ಮದ್ಯ ಸೇವಿಸುವುದು ಕಂಡುಬಂದಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ಇ– ಆಟಿಕೆ: ಭಾಷಾ ಕೌಶಲ್ಯಕ್ಕೆ ಹಾನಿ



ಎಲೆಕ್ಟ್ರಾನಿಕ್ ಆಟಿಕೆಗಳು ಮಕ್ಕಳಲ್ಲಿ ಭಾಷಾ ಕೌಶಲ್ಯವನ್ನು ಕಡಿಮೆ ಮಾಡುವ ಸಾಧ್ಯತೆ ಇದೆ ಎಂದು ಅಮೆರಿಕದ ಸಂಶೋಧಕರ ಹೊಸ ಅಧ್ಯಯನ ದೃಢಪಡಿಸಿದೆ.

ಆಧುನಿಕ ಎಲೆಕ್ಟ್ರಾನಿಕ್ ಆಟಿಕೆಗಳು ಹಾಡುತ್ತವೆ, ಸಂಭಾಷಣೆಯನ್ನು ಹೇಳುತ್ತವೆ, ಕೆಲವೊಂದು ಶಬ್ದಾನುಕರಣೆಯನ್ನು ಮಾಡುತ್ತವೆ. ಸಾಂಪ್ರದಾಯಿಕ ಆಟಿಕೆ, ಪುಸ್ತಕಗಳಿಗೆ ಹೋಲಿಸಿದರೆ ಇವು ಮಕ್ಕಳಲ್ಲಿ ಭಾಷಾ ಕೌಶಲ್ಯವನ್ನು ಹೆಚ್ಚಿಸುವುದಿಲ್ಲ ಎನ್ನುವ ಸಂಗತಿಯನ್ನು ತಜ್ಞರು ಗುರುತಿಸಿದ್ದಾರೆ.

## ರಕ್ತದಾನದಿಂದ ಕ್ಯಾನ್ಸರ್ ನಿಯಂತ್ರಣ

ರಕ್ತದಾನ ಮಾಡುವುದರಿಂದ ಕ್ಯಾನ್ಸರ್‌ನ ಅಪಾಯದಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ಸಂಶೋಧಕರು ಹೇಳಿದ್ದಾರೆ.

ನಿಯಮಿತವಾಗಿ ರಕ್ತದಾನ ಮಾಡುವುದರಿಂದ ರಕ್ತದಲ್ಲಿನ ಕಬ್ಬಿಣಾಂಶ ಹೊರಹೋಗುತ್ತದೆ. ಇದರಿಂದ ಅಧಿಕ ರಕ್ತದೊತ್ತಡದ ಅಪಾಯ ತಪ್ಪಿಸಲು ಸಾಧ್ಯವಾಗುತ್ತದೆ. ಅಧಿಕ ಕಬ್ಬಿಣಾಂಶ ಹೃದಯಬೇನೆಗೂ ಕಾರಣವಾಗುತ್ತದೆ. ದೇಹ ಹೊಸ ರಕ್ತವನ್ನು ಉತ್ಪಾದಿಸುವುದರಿಂದ ರಕ್ತದ ಕ್ಯಾನ್ಸರ್ ತಡೆಗೂ ಇದು ಅನುಕೂಲವಾಗುತ್ತದೆ. ರಕ್ತದಾನದಿಂದ ಮತ್ತೊಬ್ಬರ ಜೀವ ಉಳಿಸುವ ಜೊತೆಗೆ ವೈಯಕ್ತಿಕ ಆರೋಗ್ಯ ರಕ್ಷಣೆಯ ನಿಟ್ಟಿನಲ್ಲಿ ಹೆಚ್ಚಿನ ಲಾಭವಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

## ಶ್ವಾಸಕೋಶ ತೊಂದರೆಗೆ ಸಂಗೀತ ಚಿಕಿತ್ಸೆ

ಉಸಿರಾಟ ಸಂಬಂಧಿ ತೊಂದರೆಯಿಂದ ಬಳಲುವವರಿಗೆ ಸಂಗೀತ ಚಿಕಿತ್ಸೆ ಪರಿಣಾಮಕಾರಿ ಫಲಿತಾಂಶ ನೀಡುತ್ತದೆ ಎಂದು ನ್ಯೂಯಾರ್ಕ್ ಸಂಶೋಧಕರ ಅಧ್ಯಯನ ಹೇಳಿದೆ.

ಶ್ವಾಸಕೋಶ/ ಉಸಿರಾಟ ಸಂಬಂಧಿ ಕಾಯಿಲೆಗಳಿಂದ ಬಳಲುವವರನ್ನು ಗುಣಪಡಿಸಲು ಸಂಗೀತ ಚಿಕಿತ್ಸೆಯಿಂದ ಸಾಧ್ಯ. ಇದರಿಂದ ಗುಣಮಟ್ಟದ ಬದುಕಿನ ಬಗ್ಗೆ ಆತ್ಮವಿಶ್ವಾಸ ತುಂಬುವುದರಿಂದ ರೋಗಿಗಳು ಮಾನಸಿಕವಾಗಿಯೂ ಸಬಲರಾಗುತ್ತಾರೆ ಎನ್ನುವುದು ಸಂಶೋಧಕರ ವಾದ.

ನಿರಂತರ ಕಾಡುವ ನೆಗಡಿ– ಜ್ವರ, ಆಸ್ತಮ, ಕೆಮ್ಮು, ಎದೆಯಲ್ಲಿ ಉಸಿರುಗಟ್ಟುವುದು, ಶ್ವಾಸಕೋಶ ಸಂಬಂಧಿ ಕಾಯಿಲೆಗಳು ಸಂಗೀತ ಕೇಳುವುದು, ಹಾಡುವುದು, ಗುನುಗುವುದು, ಪರಿಕರಗಳನ್ನು ನುಡಿಸುವುದರಿಂದ ಉಸಿರಾಟದ ಏರಿಳಿತಗಳಿಂದ ಕಡಿಮೆಯಾಗುತ್ತವೆ.

–ಟಿಪ್ಸ್

